ಮಾಡೋಕೆ ಬೇರೆ ಕೆಲಸ ಇಲ್ಲ. ಈಗ ಇದನ್ನೆಲ್ಲಾ ಯಾರು ಗಮನಿಸ್ತಾರೆ. ಎಂದೋ ಮಾಯವಾಗಿರೊ ಭಾಷೆ ಅಂತ. ಹಾಗೆ ಮಾಯವಾಗುವಂತಹ ಭಾಷೆ ಅಲ್ಲ ಇದು. ನಮ್ಮ ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯೊಳಗೆ ಶಾಲಾ ಮಕ್ಕಳು ಕ್ಲಾಸ್ ರೂಮೊಳಗೆ ಒಂದು ಭಾಷೆ ಮಾತಾಡ್ತಾರೆ. ಆಚೆ ಬಂದ ತಕ್ಷಣ 'ಲೇ ಇಟ್ಟುಗಲುಂಡೇನೋ', 'ಶೇನ್ತಾಕೋಗೋಣ', 'ಸೆರುವುತಾಕೋಗೋಣ' ಅಂತ ಮಾತಾಡ್ತಾರೆ. ಇಲ್ಲಿ ಯಾವುದೂ ಮಾಯವಾಗುವುದಿಲ್ಲ. ಒಂದಷ್ಟು ಪದಗಳು ಸಿಗದೆ ಹೋಗಬಹುದು. ಹುಡುಕಿದರೆ ಅವ್ರೂ ಸಿಗುತ್ತವೆ. ಒಂದಂತೂ ಹೇಳಬಲ್ಲೆ, ಈ ಜಿಲ್ಲೆಯೊಳಗೆ ಕೃಷಿ ಇರುವವರೆಗೂ, ಶ್ರಮಿಕ ವರ್ಗ ಇರುವವರೆಗೂ ಈ ಭಾಷೇನೂ ಇರುತ್ತೆ.

◆ **ನೀವು ನೆಲದ ಸೊಗಡನ್ನು ಬಿಟ್ಟುಕೊಡದ ಬರಹಗಾರ. ಭಾಷೆ, ಬದುಕು, ಒಡನಾಟ ಎಲ್ಲವೂ ನೆಲದ ಸೊಗಡಿನ ರೂಪಗಳೆ. ಕತೆ, ಕವಿತೆ, ಲೇಖನ, ಖಂಡಕಾವ್ಯ ಎಲ್ಲದರಲ್ಲೂ ಬಂದು ಹೋಗುವುದು ಈ ನೆಲದ ಪಾತ್ರಗಳೆ. ಉದಾಹರಣೆಗೆ ಮೇಲೂರಮ್ಮ, ಜೇನು ಪೆದ್ದನ್ನ, ಮುಂಚಾಮಣ್ಣು, ಇಟ್ಟು ಮುನಿಗ. ಆದರೆ ನಿಮ್ಮ ಮುಖ್ಯ ಕೃತಿಗಳಲ್ಲೊಂದಾದ 'ಗನ್ನೇರಿ'ಯಲ್ಲಿ ಈ ನೆಲದ ಜನಪದ ಲಯಗಳ ಜೊತೆಗೆ ಹಲವು ಸ್ಥಾಪಿತ ಲಯಗಳನ್ನು ಬಳಸುವ ಪ್ರಯೋಗ ಮಾಡಿದ್ದೀರಿ. ಬಹು ಮುಖ್ಯವಾಗಿ ಕೆಎಸ್‌ನ ಮತ್ತು ಎಕ್ಕುಂಡಿ ಲಯಗಳು. ಈ ರೀತಿಯ ಪ್ರಯೋಗ ನಿಮಗೆ ಏಕೆ ಮುಖ್ಯ ಅನಿಸಿತು? ಮತ್ತು ನಿಮ್ಮದೇ ಆದ ಲಯವೊಂದರ ಸಾಧ್ಯತೆಯ ದಾರಿಯೊಂದನ್ನು ಯಾವ ಉದ್ದೇಶ ತಪ್ಪಿಸಿತು? ಅಥವಾ ನೀವೇ ಬಿಡಿಸಿಕೊಂಡದ್ದೆ?**

ಒಂದು ಹೇಳಬೇಕು ಅಂದ್ರೆ, ನನ್ನ ಬದುಕು ಮತ್ತು ಆಲೋಚನೆ ಈ ಮೊರಸುನಾಡು ಮಣ್ಣು ಮತ್ತು ಮೊರಸುನಾಡಿನ ಜನ. ನಾನು ಕಲಿತದ್ದೇ ಅವರಿಂದ. ನಾನು ಬರೆದದ್ದೂ ಅವರಿಂದ. ನಾನು ಬರೆದಿದ್ದೇನೆ ಅಂತ ಅನಿಸಲಿಲ್ಲ; ಅವರೆಲ್ಲಾ ಬರೆಸಿದ್ದಾರೆ. ಶೈಲಿಯ ಮಾತು ಬಂತು. ಅದು ನಿಜವೆ. ಈ ನೆಲದ ಜಾನಪದ ಲಯಗಳು, ಕನ್ನಡದಲ್ಲಿ ಬಂದಿರುವಂತ ಬೇರೆ ಬೇರೆ ಲಯಗಳನ್ನು ಸಣ್ಣ ಸಣ್ಣದಾಗಿ ಹೊಡೆದು ಅಗತ್ಯಕ್ಕೆ ತಕ್ಕಂತೆ ಬಳಸಿರುವುದುಂಟು. ಇನ್ನು ನೀವು ಹೇಳಿದ ಹಾಗೆ ಎಕ್ಕುಂಡಿ, ನರಸಿಂಹಸ್ವಾಮಿ ಕಾವ್ಯದ ಲಯಗಳು. ನಾನೂ ನಿಮ್ಮ ಥರಾನೆ ಯೋಚನೆ ಮಾಡಿದ್ದೆ. ಅಲ್ಲೆಲ್ಲೋ ತೋರಿಸಿದ ಹಾಗೆ ಇಲ್ಲೂ ನನ್ನದೇ ಶೈಲಿಯನ್ನ ಯಾಕೆ ದುಡಿಸಿಕೊಳ್ಳಬಾರದು ಅಂತ. ಆದರೆ ಒಂದು ಪ್ರಶ್ನೆ ನನ್ನ ಮುಂದೆ ಬಂತು. ನನ್ನ ವಾರಸುದಾರಿಕೆ ಏನು ಅಂತ. ಎಕ್ಕುಂಡಿ, ನರಸಿಂಹಸ್ವಾಮಿಯಂತಹ ಕವಿಗಳಿಗೆ ಈ ನೆಲದಲ್ಲಿ ವಾರಸುದಾರಿಕೆ ಇಲ್ಲದೆ ಹೋಗಿಬಿಟ್ರೆ ಹೇಗೆ? ಅಲ್ವ? ನಾನು ಮೆರೆಯುವುದಕ್ಕಿಂತ ನನ್ನ ಒಳಗಿರುವವರನ್ನು ಮೆರೆಸುವುದು ಒಳ್ಳೇದಲ್ವ ಅಂತ ಅನಿಸಿತ್ತು. ಹಾಗಾಗಿ ನನ್ನದೇ ಶೈಲಿಯಲ್ಲಿ ಹೇಳುವುದಕ್ಕಿಂತ ವಾರಸುದಾರಿಕೆಯನ್ನ ತಗೊಂಡು ಮುಂದುವರೆಸುವುದು ಜಾನಪದವನ್ನ ಮುಂದುವರೆಸುವಷ್ಟೇ ಮುಖ್ಯ ಆಗುತ್ತೆ. ನನ್ನ ಅಭಿಮಾನ ಇರೋದು ವಾರಸುದಾರಿಕೆಯಲ್ಲೇ ಹೊರತು ನನ್ನ ಕೈಗೆ ಇನ್ನೂ ಎಟುಕದ ಮತ್ತಿನ್ನೇನನ್ನೋ ಹುಡುಕಿಕೊಂಡು ಹೋಗಿ ಸೋಲುವುದಲ್ಲ. ವಾರಸುದಾರಿಕೆಯಲ್ಲಿ ಗೆಲ್ಲುವುದು. ಇದು ನನಗೆ ಸಾಂಸ್ಕೃತಿಕವಾಗಿ ಬಹಳ ಮುಖ್ಯ. ನಾಳೆ ಅವರು ಬೇಕಲ್ಲ. 'ಗನ್ನೇರಿ' ಓದಿ ನೀವು ಎಕ್ಕುಂಡಿ, ನರಸಿಂಹಸ್ವಾಮೀನ ನೆನಪಿಸಿಕೊಂಡ್ರಲ್ಲ. ಇನ್ನೇನೋ ಓದಿದಾಗ ಕುಮಾರವ್ಯಾಸ, ಪಂಪ, ಬೇಂದ್ರೆ, ಕುವೆಂಪು ನೆನಪಿಗೆ ಬರ್ತಾರೆ ಅಂದ್ರೆ ಅದು ನಮಗೆ ಹೆಮ್ಮೇನೆ ಅಲ್ವ. ಅದು ನನ್ನ ಹೆಮ್ಮೆ ಅಲ್ವ. ನಾನು ಹಿಡಿದಿರೋದು ಕನ್ನಡಗಳ ಬೋಗುಣಿ. 'ಕನ್ನಡಂಗಳ್' ಅಂತ ಮಹಾನುಭಾವ ಹೇಳಿದಾನಲ್ವ. ಹಾಗಾಗಿ 'ಗನ್ನೇರಿ' ಕನ್ನಡಗಳ ಬೋಗುಣಿಯೆ ಹೊರತು ಕನ್ನಡದ ಬೋಗುಣಿ ಅಲ್ಲ.

◆ **ನೀವೇ ಗನ್ನೇರಿಯಲ್ಲಿ ಒಂದು ಕಡೆ 'ಕನ್ನಡ ನೆಲ ಮನವಾಗಿ ಬದುಕಿ/ ಬಾಳು ಕಂಡವರ ಭಾಷೆ ತೆಲುಗಾಗಿ...' ಅಂತ ಹೇಳಿದ್ದೀರಿ. ಇದು ಗಡಿ ಜಿಲ್ಲೆಗಳ (ಕೋಲಾರ, ಚಿಕ್ಕಬಳ್ಳಾಪುರ, ಬಳ್ಳಾರಿ, ತುಮಕೂರಿನ ಸ್ವಲ್ಪ ಭಾಗ) ಬದುಕಿಗೆ ಕನ್ನಡಿ. ಕನ್ನಡ-ತಮಿಳು ಅಥವಾ ಕನ್ನಡ-ಮರಾಠಿ ನಡುವೆ ಬರುವಂತಹ ಸಂಘರ್ಷಗಳು (ನಾಡು-ನುಡಿಗೆ ಎರಡಕ್ಕೂ ಸಂಬಂಧಪಟ್ಟಂತೆ) ಇಲ್ಲಿ ಬರುವುದಿಲ್ಲ.**